# 'ಆನೇಕಲ್ ಕರಗದ' ಸಾಂಸ್ಕೃತಿಕ ವೈಶಿಷ್ಟ್ಯತೆಗಳು

**ಮನೋಹರ್ ಎಂ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ.ಪ್ರ.ದ.ಕಾಲೇಜು, ಮಾಲೂರು, ಕೋಲಾರ.

**Received: 12/01/2025 ; Accepted: 15/02/2025 ; Published: 03/03/2025**

**DOI: https://doi.org/10.5281/zenodo.14961384**

## ABSTRACT:

ಗಜಶಿಲಾಪುರಿ ರಾಗಿಯ ಕಣಜ ಎಂದೇ ಪ್ರಸಿದ್ಧವಾಗಿರುವ ಆನೇಕಲ್ ತಾಲ್ಲೂಕು ಸಾಂಸ್ಕೃತಿಕವಾಗಿ ಶೀಮಂತವಾದ ತಾಲ್ಲೂಕಾಗಿದೆ. ಆನೇಕಲ್ ತಾಲ್ಲೂಕಿನಲ್ಲಿ ಆಚರಿಸುವ ಕರಗವು ರಾಜ್ಯದಲ್ಲಿಯೇ ಪ್ರಖ್ಯಾತಿ ಹೊಂದಿದೆ. ಕರಗದ ಆಚರಣೆಯ ಹಿನ್ನೆಲೆಗಳು ಹಾಗೂ ಐತಿಹ್ಯಗಳು ತುಂಬಾ ಕುತೂಹಲಕಾರಿಯಾಗಿವೆ. ಶಕ್ತಿ ದೇವತೆಯಾದ ದ್ರೌಪದಿಯ ಕರಗವು ಮಾತೃದೇವತೆಯ ಆಚರಣೆಗೆ ಉದಾಹರಣೆಯಾಗಿದೆ. ಕರಗದ ಆಚರಣೆಯಲ್ಲಿ ಕರಗದ ಪೂಜಾರಿ, ಗಂಟೆ ಪೂಜಾರಿ, ಗಣಾಚಾರಿ, ಗೌಡ, ವೀರಕುಮಾರರ ಪಾತ್ರಗಳು ಮಹತ್ವವಾಗಿವೆ. ಅಂಕುರಾರ್ಪಣೆ, ಹಸಿಕರಗ, ಒಣಕರಗ, ಕೋಟೆಜಗಳಗಳ ಆಚರಣೆಗಳು ಸಾಂಸ್ಕೃತಿಕವಾಗಿ ವಿಶಿಷ್ಟವಾಗಿದ್ದು ಅವುಗಳ ಮಹತ್ವವನ್ನು ತಿಳಿಸುವ ಪ್ರಯತ್ನವೇ ಈ ಲೇಖನ.

## KEYWORDS:

ತಿಗಳ, ವಹ್ನಿಕುಲ, ದ್ರೌಪದಿ, ಮಾತೃದೇವತೆ, ಆನೇಕಲ್, ಕೋಟೆಜಗಳ, ಧರ್ಮರಾಯಸ್ವಾಮಿ, ಹೂವಿನ ಕರಗ.

**ಕರಗ:**

ಕರಗ ಕಲೆಯ ಹುಟ್ಟಿನ ಬಗ್ಗೆ ಜಿಜ್ಞಾಸೆಗಳಿವೆ. ಕರಗದ ಕಲಾವಿದರು ಕೊಡುವ ಮೌಖಿಕ ಆಧಾರಗಳಿಂದ ಹಾಗೂ ಐತಿಹ್ಯಗಳಿಂದ ಇದರ ಹಿನ್ನೆಲೆಯನ್ನು ತಿಳಿಯಬಹುದು. ವಹ್ನಿಕುಲದವರು ಕಳಸ ಹೊತ್ತು ನೃತ್ಯ ಮಾಡುತ್ತಾ ದೇವರ ಹರಕೆ ಒಪ್ಪಿಸುವ ಆಚರಣೆಯೇ ಕರಗ. ಶಕ್ತಿದೇವತೆಯರ ಉಪಾಸನೆಯಿಂದಾಗಿ ಬೆಳೆದು ಬಂದ ಜನಪದ ಕಲೆಯೇ ಕರಗ. ಕರ್ನಾಟಕ, ತಮಿಳುನಾಡುಗಳಲ್ಲಿ ವಿಶೇಷವಾಗಿ ಕರಗ ಉತ್ಸವವು ಆಚರಣೆಯಲ್ಲಿ ಇರುವುದನ್ನು ಕಾಣಬಹುದು. ಪ್ರತಿವರ್ಷ ಏಪ್ರಿಲ್ ತಿಂಗಳ ಚೈತ್ರ ಹುಣ್ಣಿಮೆಯ ದಿನದಂದು ಕರಗ ಆಚರಣೆ ನಡೆಯುತ್ತದೆ. ವಹ್ನಿಕುಲ

ಕ್ಷತ್ರಿಯರ ವಿವಿಧ ಪಂಗಡಗಳು ದ್ರೌಪದಿಯನ್ನು ಕುಲದೇವತೆಯಾಗಿ ಆರಾಧಿಸುತ್ತಾರೆ. ದ್ರೌಪದಿ ಅವರಿಗೆ ಆರಾಧ್ಯದೈವ ಹಾಗೂ ಆದಿಶಕ್ತಿಯಾಗಿದ್ದಾಳೆ. ಅವಳ ಹೆಸರಿನಲ್ಲಿಯೇ ಕರಗ ನಡೆಸುತ್ತಾರೆ.

ಕರಕಃ ಎಂಬ ಸಂಸ್ಕೃತ ಶಬ್ದದ ತದ್ಭವ ರೂಪವೇ ಕರಗ. 'ಕಮಂಡಲೌಚ ಕರಗ' ಎಂಬ ಉಕ್ತಿಯು ಅಮರಕೋಶದಲ್ಲಿದೆ. ಕರಗ ಎಂದರೆ ಕಲಶ (ಜಲಪಾತ್ರೆ) ಎಂಬ ಅಭಿಪ್ರಾಯವಿದೆ. ಕರಗ ಎಂದರೆ ಮಣ್ಣಿನ ಗಡಿಗೆ, ಕುಂಭ ಎಂಬ ಅರ್ಥಗಳು ಇವೆ. ಗಡಿಗೆಯನ್ನು ಕೈಯಲ್ಲಿ ಹಿಡಿಯದೆ ರುಂಡದ (ತಲೆ) ಮೇಲೆ ಹೊತ್ತು ಚಲಿಸುವುದು. ಆದಿಶಕ್ತಿ ಸ್ವರೂಪಿಣಿಯಾದ ದ್ರೌಪದಿಯನ್ನು ಕರಗದ ರೂಪದಲ್ಲಿ ಆವಾಹನೆ ಮಾಡಿ ಆಚರಿಸುವುದೇ ಇದರ ಮೂಲ ಆಶಯ.

'ಕರಗ' ಎನ್ನುವ ಶಬ್ದಕ್ಕೆ ಕೆ. ಲಕ್ಷ್ಮಣ ಅವರು ತಮ್ಮದೇ ಆದ ಅರ್ಥವನ್ನು ಕಲ್ಪಿಸಿದ್ದಾರೆ. 'ಕ' ಎಂದರೆ ಕೈಯಲ್ಲಿ ಮುಟ್ಟದೆ 'ರ' ಎಂದರೆ ರುಂಡದಲ್ಲಿ ಧರಿಸಿ, 'ಗ' ಎಂದರೆ ಗಮಿಸುವುದು ಅಥವಾ ಸುತ್ತುವುದು ಎಂದರ್ಥ. ಕೈಯಲ್ಲಿ ಮುಟ್ಟದೆ ಶಿರದಲ್ಲಿ ಧರಿಸಿ ಭಕ್ತಾದಿಗಳಿಗೆ ದರ್ಶನ ನೀಡುವುದೇ ಕರಗದ ವಿಶೇಷ.

ವಹ್ನಿಕುಲಸ್ಥರ ಬಗ್ಗೆ ಕೆಲವೊಂದು ನಂಬಿಕೆಗಳಿವೆ. ಇವರು ಜಗನ್ಮಾತೆಯ ಭಕ್ತರು, ವಹ್ನಿಕುಲ ಕ್ಷತ್ರಿಯರೂ, ಧರ್ಮರಾಯನ ಒಕ್ಕಲಿಗರೂ, ತ್ರಿಗಳರೆಂದೂ ಇವರನ್ನು ಕರೆಯುತ್ತಾರೆ. ಚಾತುರ್ವರ್ಣಗಳಲ್ಲಿ ಕ್ಷತ್ರಿಯ ವರ್ಣದ ಉಪ ಶಾಖೆಯೇ ಈ ವಹ್ನಿಕುಲ ಕ್ಷತ್ರಿಯರು. ತ್ರಿಗಳ ಪದ ಮುಂದೆ ತಿಗಳವಾಗಿ ರೂಪಾಂತರವಾಗಿದೆ ಎಂಬುದು ಕೆಲವರ ವಾದ. ಈ ವಹ್ನಿಕುಲ ಜನಾಂಗದವರು ಭಾರತದ ಅನೇಕ ಭಾಗಗಳಲ್ಲಿ ನೆಲೆಸಿದ್ದಾರೆ. ತಮಿಳುನಾಡಿನಿಂದ ಕರ್ನಾಟಕಕ್ಕೆ ಕಾರಣಾಂತರಗಳಿಂದ ವಲಸೆ ಬಂದ ಕೆಲವು ಪಂಗಡಗಳಲ್ಲಿ ತಮಿಳು ಭಾಷೆಯೇ ಮಾತೃಭಾಷೆಯಾಗಿ ಉಳಿದು ಬಂದಿದೆ. ಈ ಜನಾಂಗದವರು ವಿಶೇಷವಾಗಿ ಬೆಂಗಳೂರಿನ ಯಲಹಂಕ, ಹೆಸರಘಟ್ಟ, ಹೊಸಕೋಟೆ, ಮಾಲೂರು, ಆನೇಕಲ್ ಮೊದಲಾದ ಸ್ಥಳಗಳಲ್ಲಿ ನೆಲೆಸಿದ್ದಾರೆ.

ಕರಗ ಉತ್ಸವವು ಚೈತ್ರ ಮಾಸದಲ್ಲಿ ಕೆಲವು ಕಡೆ ಏಳು ದಿನಗಳು, ಇನ್ನೂ ಕೆಲವು ಭಾಗಗಳಲ್ಲಿ ಒಂಬತ್ತು ದಿನಗಳವರೆಗೆ ಜರಗುತ್ತದೆ. ಧಾರ್ಮಿಕವಾಗಿ ಆಚರಿಸಲ್ಪಡುವ ಈ ಕರಗವನ್ನು ಆನೇಕಲ್ ತಾಲ್ಲೂಕಿನಲ್ಲಿ ತಿಗಳ ಜನಾಂಗದವರೇ ವಂಶಪಾರಂಪರ್ಯವಾಗಿ ಶ್ರದ್ಧಾ ಭಕ್ತಿಗಳಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ತಿಗಳರು ತಮ್ಮ ಕುಲದೇವಿಯಾದ ದ್ರೌಪದಿಯ ಆಚರಣೆಗೆ ಶಕ್ತಿಕರಗ, ಶಕ್ತ್ಯೋತ್ಸವ ಎಂದೂ ಕರೆಯುತ್ತಾರೆ. ಈ ಕರಗ ಆಚರಣೆಯ ಹಿನ್ನೆಲೆಗೆ ಸಂಬಂಧಿಸಿದಂತೆ ಹಲವಾರು ಕಥೆಗಳು ಪ್ರಚಲಿತದಲ್ಲಿವೆ.

ಧರ್ಮರಾಯನು ಪಗಡೆಯಾಟದಲ್ಲಿ ಸಮಸ್ತವನ್ನು ಕಳೆದುಕೊಂಡು ವನವಾಸಕ್ಕೆ ಹೋಗುವಾಗ ಶ್ರೀಕೃಷ್ಣನು ಇನ್ನು ಮುಂದೆ ಪಾಂಡವರನ್ನು ಕಾಪಾಡುವ ಶಕ್ತಿ ದ್ರೌಪದಿಯಲ್ಲಿ ಮಾತ್ರೆ ಇದೆ. ಆದುದರಿಂದ ಅವಳಿಂದ ವರವನ್ನು ಪಡೆಯುವಂತೆ ಭೀಮನಿಗೆ ತಿಳಿಸುತ್ತಾನೆ. ಒಂದು ದಿನ ರಾತ್ರಿ ದ್ರೌಪದಿಯು ಬಿರುಕು ಬಿಟ್ಟ ಭೂಮಿಯಲ್ಲಿ ರುದ್ರರೂಪವನ್ನು ತಾಳಿರುತ್ತಾಳೆ. ಆಗ ಭೀಮನು ಕುರಿ, ಕೋಳಿ ಮುಂತಾದ ಪ್ರಾಣಿಗಳ ಬಲಿ ನೀಡಿ ಶಾಂತಗೊಳಿಸಿ, ಅವಳನ್ನು ಭದ್ರವಾಗಿ ಹಿಡಿದುಕೊಂಡು ಪಾಂಡವರನ್ನು ಉಳಿಸುವಂತೆ ವರ ಪಡೆಯುತ್ತಾನೆ. ಮುಂದೆ ಈ ಸನ್ನಿವೇಶದ ನೆನಪಿಗಾಗಿ ಕರಗವನ್ನು ಆಚರಿಸಲಾಯಿತು.

ಕೌರವರ ರಾಜಸಭೆಯಲ್ಲಿ ದ್ರೌಪದಿಯ ವಸ್ತ್ರಾಪಹರಣ ಸಂದರ್ಭದಲ್ಲಿ ಪಾಂಡವರು ತಮ್ಮ ಧರ್ಮಕ್ಕೆ ಕಟ್ಟುಬಿದ್ದು ಸುಮ್ಮನಾಗುತ್ತಾರೆ. ಆಗ ದ್ರೌಪದಿಯ ರಕ್ಷಣೆಗಾಗಿ ವೀರಕುಮಾರರು ಅವತರಿಸಿ ಬರುತ್ತಾರೆ. ಈ ವೀರಕುಮಾರರೇ ಕರಗದ ಪ್ರತಿನಿಧಿಗಳಾಗಿ ಕತ್ತಿಹಿಡಿದು ಢಿಕ್ ಢೀ, ಢಿಕ್ ಢೀ ಎಂದು ಅಲಗು ಸೇವೆ ಮಾಡುತ್ತಾ ಕರಗದ ಸೇವೆಯನ್ನು ನೆರವೇರಿಸುತ್ತಾರೆ ಎಂಬ ನಂಬಿಕೆಯಿದೆ.

ಪಾಂಡವರು ದ್ರೌಪದಿಯ ಪಾತಿವ್ರತ್ಯದ ಪರೀಕ್ಷೆಗಾಗಿ 'ಪೋತಲು' ಎಂಬ ರಾಜನಿಂದ ಕರಗವನ್ನು ತಂದು ಅವಳಿಗೆ ಕೊಟ್ಟರು. ಆಗ ದ್ರೌಪದಿಯು ಅರಿಶಿನದ ಉಡುಗೆ ತೊಟ್ಟು, ಕರಗವನ್ನು ತಲೆಯ ಮೇಲೆ ಹೊತ್ತು, ಕೈಯಲ್ಲಿ ಚಾವಟಿಯನ್ನು ಹಿಡಿದು ಊರೆಲ್ಲಾ ಸುತ್ತಿ ಅಗ್ನಿಪ್ರವೇಶ ಮಾಡಿ, ಯಾವುದೇ ಅಪಾಯವಿಲ್ಲದೆ ಅಲ್ಲಿಂದ ಹೊರಬಂದಳು. ಅದರ ಪ್ರತೀಕವಾಗಿ ಕರಗ ನಡೆಯುತ್ತದೆ.

ಈ ಮೇಲಿನ ಎಲ್ಲಾ ಕಥೆಗಳು ಸತ್ಯವೋ ಅಥವಾ ಮಿಥ್ಯವೋ ಆದರೆ, ಕರಗದ ಆಚರಣೆಯ ಹಿನ್ನೆಲೆ ಹಾಗೂ ಉದ್ದೇಶ ಮಾತ್ರ ಲೋಕ ಕಲ್ಯಾಣವೇ ಆಗಿದೆ. ವಿಶೇಷವಾಗಿ ಕರಗದ ಆಚರಣೆಯನ್ನು ವಹ್ನಿಕುಲಸ್ಥರು ತಮ್ಮ ವಂಶ ಮತ್ತು ಕುಲದೇವಿಯ ಶ್ರೇಷ್ಠತೆಯನ್ನು ಕುರಿತಾಗಿ ಕರಗದ ಆಚರಣೆಗಿರುವ ಪಾವಿತ್ರ್ಯತೆ ಹೇಳುವ ಸಲುವಾಗಿಯೇ ಹುಟ್ಟಿಕೊಂಡ ಕಥೆಗಳಾಗಿವೆ. ವಹ್ನಿಕುಲದವರ ಪ್ರಧಾನ ಕಸುಬು ಕೃಷಿ. ಆದ್ದರಿಂದ ಕರಗ ವ್ರತವನ್ನು ಕೃಷಿ ಮೂಲವಾಗಿ ನಂಬಿಕೆ, ಶ್ರದ್ಧೆ ಹಾಗೂ ಭಕ್ತಿಯ ಆಚರಣೆಯನ್ನಾಗಿ ಆಚರಿಸುತ್ತಿದ್ದಾರೆ.

**ಆನೇಕಲ್ ಕರಗ:**

ಆನೇಕಲ್ ಕರಗ ಉತ್ಸವವನ್ನು ಹಸಿಕರಗ ಮತ್ತು ಹೂವಿನ ಕರಗ ಎಂಬ ಎರಡು ಬಗೆಯ ಸಾಂಕೇತಿಕವಾದ ಧಾರ್ಮಿಕ ಉತ್ಸವಗಳಾಗಿ ಆಚರಿಸಲಾಗುತ್ತದೆ. ಕರಗ ಮಹೋತ್ಸವಕ್ಕೆ ನಿಗದಿಪಡಿಸಿದ ದಿನಾಂಕಕ್ಕಿಂತ ಒಂದು ವಾರದ ಹಿಂದಿನಿಂದಲೂ ಧರ್ಮರಾಯಸ್ವಾಮಿ ದೇವಾಲಯದಲ್ಲಿ ಅಂಕುರಾರ್ಪಣ, ಆರತಿ ದೀಪ,

ಕಲ್ಯಾಣೋತ್ಸವ, ರಥೋತ್ಸವ ಮೊದಲಾದ ಸೇವೆಗಳು ನಡೆಯುತ್ತವೆ. ಬೆಂಗಳೂರಿನಲ್ಲಿ ಕರಗ ನಡೆಯುವ ದಿನವೇ ಆನೇಕಲ್‌ನಲ್ಲಿಯೂ ಹಸಿಕರಗ ಉತ್ಸವ ನಡೆಯುತ್ತದೆ. ಬೆಂಗಳೂರಿನ ಕರಗದಂತೆ ಆನೇಕಲ್‌ನ ಕರಗವೂ ಅದ್ಭುತವೆಂದು ಭಕ್ತರು ಹೊಗಳುತ್ತಾರೆ.

ಆನೇಕಲ್ ಕರಗವು ವೈಶಾಖ ಮಾಸದ ಹುಣ್ಣಿಮೆಯ ದಿನ ನಡೆಯುತ್ತದೆ. ಕರಗದ ಹಿಂದಿನ ದಿನದ ರಾತ್ರಿ, ಕರಗ ಹೊರಲಿರುವ ಪೂಜಾರಿಯು ನಿಯಮಬದ್ಧನಾಗಿ ದೀಕ್ಷೆಯನ್ನು ಹೊಂದಿ, ಸ್ತ್ರೀಯಂತೆ ವೇಷ ಭೂಷಣಗಳನ್ನು ಧರಿಸಿ, ಆನೇಕಲ್ ಪಟ್ಟಣದ ಚಿಕ್ಕಕೆರೆಯ ಬಳಿಗೆ ಹೋಗಿ ಮಡಿ ಮೈಲಿಗೆಗಳನ್ನು ಪೂರೈಸಿ, ದೇವಾಲಯಕ್ಕೆ ಆಗಮಿಸಿ, ಪುಷ್ಪಾದಿಗಳಿಂದ ಅಲಂಕರಿಸಿಕೊಳ್ಳುವರು. ಕರಗದ ದಿನ ಮುಂಜಾನೆಯಿಂದ ವಿವಿಧ ಪೂಜಾ ಕಾರ್ಯಗಳು ಜರುಗುತ್ತವೆ. ವೀರಕುಮಾರರು, ಪೂಜಾರಿ, ಗಣಾಚಾರಿ, ಘಂಟಿ ಪೂಜಾರಿಗಳಾದಿಯಾಗಿ ಮನೆಯ ಮಹಿಳೆ ಮಕ್ಕಳೆಲ್ಲಾ ಮಿಂದು ಮಡಿಯುಟ್ಟು, ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ. ಪೂಜಾ ವಿಧಿವಿಧಾನಗಳು ದೇವಾಲಯದ ಗರ್ಭ ಗುಡಿಯಲ್ಲಿ ನಡೆಯುತ್ತಿರುವಾಗ ಕತ್ತಿಹಿಡಿದ ವೀರಕುಮಾರರು ಅಲಗು ಸೇವೆ ಮಾಡುವರು. ನಂತರ ಪೋತರಾಜನ ಉತ್ಸವಮೂರ್ತಿಯನ್ನು ಕುಲಬಾಂಧವರ ಮನೆ ಮನೆಗಳಿಗೆ ಒಯ್ದು ಪೂಜೆಗಳನ್ನು ಮುಗಿಸಿಕೊಂಡು ಮಧ್ಯರಾತ್ರಿಯಷ್ಟರಲ್ಲಿ ಧರ್ಮರಾಯಸ್ವಾಮಿ ಆಲಯಕ್ಕೆ ಹಿಂದಿರುಗುತ್ತಾರೆ. ಇವರೊಂದಿಗೆ ಘಂಟಾ ಪೂಜಾರಿಗಳು, ಪಂಜಿನವರು ಕುಲಸ್ಥ ಮಹಿಳೆಯರು ತುಪ್ಪದ ದೀಪಗಳೊಂದಿಗೆ ಆಗಮಿಸುತ್ತಾರೆ.

ಆನೇಕಲ್ ಪಟ್ಟಣದಲ್ಲಿ ನಡೆಯುವ ಕರಗದ ಆಚರಣೆಗಳು ತುಂಬಾ ಪ್ರಸಿದ್ಧಿಯಾಗಿವೆ. ಕರಗ ನಡೆಯುವ ಸಂದರ್ಭದಲ್ಲಿ ಅನೇಕ ವಿಧಿ ವಿಧಾನಗಳನ್ನು ಅನುಸರಿಸುತ್ತಾರೆ. ಅವುಗಳಲ್ಲಿ ತುಂಬಾ ವಿಶೇಷವಾದವುಗಳನ್ನು ಇಲ್ಲಿ ಗುರುತಿಸಿದ್ದೇನೆ.

**ಅಂಕುರಾರ್ಪಣೆ:**

ಕರಗದ ಆಚರಣೆಗೆ ದಿನಾಂಕ ಹಾಗೂ ಸಿದ್ಧತೆಗಳನ್ನು ನಿಗಧಿಪಡಿಸಿ, ಅದನ್ನು ಎಲ್ಲರಿಗೂ ಪ್ರಕಟಿಸುವುದೇ ಅಂಕುರಾರ್ಪಣೆ. ಕರಗದ ಆಚರಣೆಯಲ್ಲಿ ಪ್ರಮುಖವಾಗಿ ತಿಗಳ ವಂಶದ ಗಣಾಚಾರಿ, ಗೌಡ ಯಜಮಾನ, ಕರಗಪೂಜಾರಿ, ಭರತಪೂಜಾರಿ ಅಥವಾ ಗಂಟಿಪೂಜಾರಿ, ಪೋತರಾಜ ಮುಖ್ಯ ಪಾತ್ರವಹಿಸುತ್ತಾರೆ. ಆನೇಕಲ್ ಪಟ್ಟಣ ಮತ್ತು ಸುತ್ತಮುತ್ತಲಿನ ತಿಗಳ ಜನಾಂಗದವರು ಸಭೆ ಸೇರಿ ಕರಗದ ಆಚರಣೆಯ ಬಗ್ಗೆ ಚರ್ಚಿಸುತ್ತಾರೆ. 10 ದಿನಗಳ ಮೊದಲೇ ಒಬ್ಬ ಹರಿಜನ ವ್ಯಕ್ತಿಯನ್ನು ನೇಮಿಸಿ ಅವನಿಂದ ಸಾಟು ಇಡುವುದರ ಮೂಲಕ ಎಲ್ಲರಿಗೂ ತಿಳಿಸುತ್ತಾರೆ. ಕರಗ ಆಚರಣೆಯ ಖರ್ಚು ವೆಚ್ಚಗಳ ಬಗ್ಗೆ ಈ ಸಭೆಯಲ್ಲಿಯೇ ತೀರ್ಮಾನಿಸುತ್ತಾರೆ.

ಸಾಟು ಹಿಡಿದ ದಿನದಿಂದ ಮನೆಗಳಲ್ಲಿ ಕಡ್ಡಾಯವಾಗಿ ನಿಯಮಗಳನ್ನು ಪಾಲಿಸುತ್ತಾರೆ. ಕರಗದ ಆಚರಣೆ ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುವರು. ವಾಲಗದವರಿಗೆ, ಪಂಜು, ಹಿಡಿಯುವವರಿಗೆ, ಬ್ರಾಹ್ಮಣ ಪೂಜಾರಿಗಳಿಗೆ ಮೊದಲೇ ತಿಳಿಸುತ್ತಾರೆ. ಕರಗದ ಆಚರಣೆಯನ್ನು ಬ್ರಾಹ್ಮಣ ಪೂಜಾರಿಯೇ ಪ್ರಾರಂಭಿಸಿದರೂ ದ್ರೌಪದಿ ದೇವಾಲಯದ ಅರ್ಚಕ ತಿಗಳ ಜನಾಂಗದವರೇ ಆಗಿರುತ್ತಾರೆ.

**ಹಸಿಕರಗ:**

ಆನೇಕಲ್ಲಿನಲ್ಲಿ ಕರಗದ ಆಚರಣೆಯ ಮೊದಲನೆಯ ದಿನ ಈ ಹಸಿಕರಗ ನಡೆಯುತ್ತದೆ. ಬೆಂಗಳೂರಿನಲ್ಲಿ ಕರಗ ನಡೆಯುವ ದಿನದಂದೆ ಇಲ್ಲಿ ಹಸಿಕರಗ ನಡೆಯುತ್ತದೆ. ಜನರು ಬೆಂಗಳೂರು ಕರಗದಂತೆ ಆನೇಕಲ್ ಕರಗವೂ ಅದ್ಭುತವಾದುದೆಂದು ಭಾವಿಸಿದ್ದಾರೆ. ಆನೇಕಲ್ ಸಮೀಪದಲ್ಲಿರುವ ಚಿಕ್ಕ ಕೆರೆಯ ಹತ್ತಿರದ ಒಂದು ಬಾವಿಯ ಬಳಿ ಹಸಿಕರಗ ಪ್ರಾರಂಭವಾಗುತ್ತದೆ. ರಾತ್ರಿ ಸುಮಾರು 12:30 ಸಮಯಕ್ಕೆ ಕರಗದ ಉತ್ಸವಕ್ಕೆ ಅಧಿಕೃತವಾಗಿ ಚಾಲನೆ ಸಿಗುತ್ತದೆ. ಒಂದು ನಿರ್ದಿಷ್ಟ ಸ್ಥಳದಿಂದ ಕರಗದ ಕುಂಭವನ್ನು ಮುಚ್ಚಿಟ್ಟುಕೊಂಡು ತರುತ್ತಾರೆ. ಈ ಕುಂಭವನ್ನೇ ಹಸಿಕರಗ ಎಂದು ಕರೆಯುತ್ತಾರೆ.

ಹಸಿಕರಗದ ದಿನ ತಿಗಳ ಕುಲಬಾಂಧವರಿಗೆ ಅತಿ ಮಹತ್ವದ ದಿನವಾಗಿರುತ್ತದೆ. ಕರಗ ನಡೆಯುವ ಸುತ್ತಮುತ್ತಲ ಬೀದಿಗಳು ತಳಿರು ತೋರಣಗಳಿಂದ ದೀಪಾಲಂಕಾರಗಳಿಂದ ಸಿಂಗಾರಗೊಂಡಿರುತ್ತವೆ. ಅಂದು ವೀರಕುಮಾರರು, ಗಣಾಚಾರಿಗಳು, ಗಂಟಿಪೂಜಾರಿಗಳು, ಕುಲಪುರೋಹಿತರು ಎಲ್ಲರೂ ಮಡಿ ಮೈಲಿಗೆ ಮಾಡಿ ದೇವರ ಆರಾಧನೆಯಲ್ಲಿ ಭಾಗವಹಿಸುತ್ತಾರೆ. ವೀರಕುಮಾರರಿಗೆ ಜನಿವಾರ ತೊಡಿಸುತ್ತಾರೆ. ಬ್ರಾಹ್ಮಣ ಪೂಜಾರಿಗಳು ಪೂಜಾ ವಿಧಿವಿಧಾನಗಳನ್ನು ನೆರವೇರಿಸುತ್ತಾರೆ. ಕರಗವನ್ನು ಹೊರುವ ಪೂಜಾರಿಗೆ ಸ್ನಾನಾದಿಗಳನ್ನು ಮಾಡಿಸಿ, ಕೈಗಳಿಗೆ ಬಳೆಗಳು, ಕಾಲಿಗೆ ಗೆಜ್ಜೆ, ಅರಿಶಿನದ ವಸ್ತ್ರ ತೊಡಿಸಿ ಹೆಣ್ಣಿಗೆ ಸಿಂಗಾರ ಮಾಡಿದಂತೆ ಅಣಿಗೊಳಿಸುತ್ತಾರೆ. ಗಣಾಚಾರಿಗಳು ಮತ್ತು ಇತರರು ಕುಂಭಕ್ಕೆ ಗೌಪ್ಯವಾಗಿ ಹೂವಿನ ಅಲಂಕಾರ ಮಾಡುತ್ತಾರೆ. ಆನಂತರ ಭರತಪೂಜಾರಿಯ ಚಟುವಟಿಕೆಗಳು ಪ್ರಾರಂಭವಾಗುತ್ತದೆ. ಅಲಂಕೃತವಾದ ಹಸಿಕರಗಕ್ಕೆ ಪೂಜಾರಿಯಿಂದ ಪೂಜೆ ಮಂಗಳಾರತಿ ನಡೆಯುತ್ತದೆ. ಆ ಸಂದರ್ಭದಲ್ಲಿ ಗಂಟಿಪೂಜಾರಿಗಳು ಗಂಟೆ ಬಾರಿಸುತ್ತಾರೆ. ಭಾಗವತ ಪೂಜಾರಿಗಳು ಭಾಗವತ ಪಠಣ ಮಾಡುತ್ತಾರೆ. ಕುಲಪುರೋಹಿತರು, ಗಣಾಚಾರಿಗಳು, ವೀರಕುಮಾರರು ಎಲ್ಲರೂ ಒಟ್ಟಿಗೆ ಸೇರಿ 'ಗೋವಿಂದ' ಎಂದು ಮೂರು ಸಲ ಉಚ್ಚರಿಸಿ ಶಕ್ತಿಯ ಆವಾಹನೆ ಮಾಡುತ್ತಾರೆ. ವೀರಕುಮಾರರು ತಮ್ಮ ಕೈಯಲ್ಲಿನ ಕತ್ತಿಗಳಿಂದ ಡಿಕ್ ಥಿ ಎಂದು ಶ್ರೀಹರಿಯನ್ನು

ನೆನೆಯುತ್ತಾ ತಮ್ಮ ಎದೆಗೆ ಹೊಡೆದುಕೊಳ್ಳುತ್ತಾರೆ. ಈ ವಿಧಿಗೆ 'ಅಲಗು ಸೇವೆ' ಎನ್ನುತ್ತಾರೆ.

ಹಸಿ ಕರಗಕ್ಕೆ ತನ್ನದೇ ಆದ ಮಹತ್ವವಿದೆ. ಹಸಿಕರಗವೆಂದರೆ ಬೇಯಿಸದಿರುವ ಹಸಿ ಮಣ್ಣಿನ ಗಡಿಗೆ, ಶುದ್ಧವಾದ ಮಣ್ಣಿಗೆ ಎಳನೀರು, ಹಾಲನ್ನು ಬೆರಸಿ ಹದಗೊಳಿಸಿದ ಗಡಿಗೆ. ಇದರಲ್ಲಿ ಮಂಗಳಕರವಾದ ಎಲೆ, ಅಡಿಕೆ, ಅರಿಶಿನ, ಕುಂಕುಮ, ಮಂಗಳ ದ್ರವ್ಯಗಳು ಇರುತ್ತವೆ. ಈ ಗಡಿಗೆಯನ್ನು ಬಹಳ ಕಟ್ಟುನಿಟ್ಟಿನಿಂದ ತಯಾರಿಸುತ್ತಾರೆ.

**ಹೂವಿನ ಕರಗ:**

ಕರಗದ ಧ್ವಜಾರೋಹಣದ ನಂತರ ಹುಣ್ಣಿಮೆ ದಿನ ಆಚರಿಸುವ ಉತ್ಸವವೇ ಹೂವಿನ ಕರಗ. ಮಲ್ಲಿಗೆ ಹೂಗಳಿಂದ ಅಲಂಕರಿಸಲಾಗಿರುತ್ತದೆ. ಕರಗದ ಆಚರಣೆಯಲ್ಲಿಯೇ ಈ ಉತ್ಸವವು ಪ್ರಧಾನವಾಗಿರುತ್ತದೆ. ಹೂವಿನ ಕರಗದ ದಿನ ಕೊಂಡ ಹಾಯುವುದು ವಿಶೇಷ ಪದ್ಧತಿ. ಪ್ರಮುಖ ದೇವರುಗಳ ಪಲ್ಲಕ್ಕಿಯ ರಥೋತ್ಸವಗಳು ನಡೆಯುತ್ತವೆ. ಬೆಳಗ್ಗೆಯಿಂದ ಸಂಜೆಯವರೆಗೂ ಜನ ಜಾತ್ರೆಯೇ ಸೇರಿರುತ್ತದೆ. ಅಂದು ರಾತ್ರಿ ಆಗುತ್ತಿದ್ದಂತೆ ಹಸಿಕರಗ ನಡೆದ ದಿನ ಹೇಗೆ ಪೂಜಾ ವಿಧಿವಿಧಾನಗಳು ನಡೆದವೋ ಹಾಗೆ ಇಂದೂ ನಡೆಯುತ್ತವೆ. ದೇವಾಲಯದ ಬಳಿ ಶಕ್ತಿ ಪೀಠವನ್ನು ಸ್ಥಾಪಿಸಿ ಅಲ್ಲಿ ವಿವಿಧ ಆಯುಧಗಳನ್ನು ಇಟ್ಟು ಪೂಜಿಸುತ್ತಾರೆ. ದ್ರೌಪದಿ ದೇಗುಲದಲ್ಲಿ ವೀರಕುಮಾರರು, ಗಣಾಚಾರಿ, ಗಂಟಿಪೂಜಾರಿಗಳು, ಕರಗದ, ಭಾಗವತ ಪೂಜಾರಿಗಳು, ಕುಲಬಾಂಧವರು, ಪೋತರಾಜ ಎಲ್ಲರೂ ಸ್ನಾನಾದಿಗಳನ್ನು ಮಾಡಿ ಪೂಜಾ ಕಾರ್ಯದಲ್ಲಿ ಭಾಗವಹಿಸುತ್ತಾರೆ.

ಕರಗದ ಉತ್ಸವದಲ್ಲಿ ಪಾಲ್ಗೊಂಡವರಿಗೆ ಶಾಂತಿ, ನೆಮ್ಮದಿ, ಸಂಪತ್ತು ವೃದ್ಧಿಸುತ್ತದೆಂಬ ನಂಬಿಕೆ ಇದೆ. ಈ ಕರಗವನ್ನು ನೋಡಲು ತಾಲ್ಲೂಕಿನ ಮೂಲೆ ಮೂಲೆಗಳಿಂದ ಜನರು ಧಾವಿಸುತ್ತಾರೆ. ಜಾತಿ ಭೇದವನ್ನು ಮರೆತು ನಗರದ ಎಲ್ಲರೂ ಈ ಉತ್ಸವದಲ್ಲಿ ಭಾಗವಹಿಸುತ್ತಾರೆ. ಈ ಕರಗವು ಮುಸ್ಲಿಂರ ಪ್ರಮುಖ ದರ್ಗವಾದ ಬಾಬಯ್ಯನ ಗುಡಿಗೆ ಹೋಗಿ ಪ್ರದಕ್ಷಿಣೆ ಹಾಕಿ ಅವರಿಂದ ಪೂಜೆಗೊಂಡು ಬರುತ್ತದೆ. ಇದೊಂದು ಧಾರ್ಮಿಕ ಸಾಮರಸ್ಯಕ್ಕೆ ಉದಾಹರಣೆಯಾಗಿದೆ. ಕರಗವು ಮುಸಲ್ಮಾನರ ದರ್ಗಾ ಹತ್ತಿರಕ್ಕೆ ಹೋಗುವುದಕ್ಕೆ ಪುರಾಣದ ಕಥೆಗಳೊಂದಿಗೂ ತಾಳೆಹಾಕಿರುವುದನ್ನು ಗಮನಿಸಬಹುದು.

ಕರಗದ ದಿನ ಆನೇಕಲ್ ಪಟ್ಟಣದ ಪ್ರಮುಖ ದೇವಾಲಯಗಳು ಅಲಂಕೃತವಾಗಿರುತ್ತವೆ. ಚೌಡೇಶ್ವರಿ, ಶನಿಮಹಾತ್ಮ, ಶ್ರೀರಾಮ, ಆಂಜನೇಯ, ಬಸವೇಶ್ವರ, ತಿಮ್ಮರಾಯಸ್ವಾಮಿ ಮುಂತಾದ ದೇವರುಗಳ ಉತ್ಸವ ಮೂರ್ತಿಗಳ ಪಲ್ಲಕ್ಕಿಗಳು ಜರುಗುತ್ತವೆ. ವಿವಿಧ ರೀತಿಯ ಪ್ರದರ್ಶನಗಳು, ಕಲೆಗಳ ಮನರಂಜನಾ

ಕಾರ್ಯಕ್ರಮಗಳು ರಾತ್ರಿ ಇಡೀ ನಡೆಯುತ್ತವೆ. ಭಾಗವಹಿಸುವ ಭಕ್ತರಿಗೆ ಅನ್ನದಾಸೋಹಗಳು ನಿರಂತರವಾಗಿ ಸಾಗುತ್ತಿರುತ್ತದೆ. ರಾತ್ರಿಯೆಲ್ಲ ಹರಿಕಥೆ, ಭಜನೆಗಳು, ಉತ್ಸವಗಳು, ಜನಪದ ಕಲೆಗಳು ಕಂಡುಬರುತ್ತವೆ. ಇಡೀ ಪಟ್ಟಣವನ್ನು ವಿದ್ಯುದೀಪಗಳಿಂದ ಅಲಂಕರಿಸಲಾಗಿರುತ್ತದೆ. ಕರಗ ಮುಗಿದ ನಂತರ ಮಾರನೆಯ ದಿನದಂದು ವಿಶೇಷ ಆಚರಣೆಗಳು ನಡೆಯುತ್ತವೆ. ಆನೇಕಲ್‌ನ ಧರ್ಮರಾಯಸ್ವಾಮಿ ದೇಗುಲದ ಮುಂಭಾಗದಲ್ಲಿ ನಡೆಯುವ ಕೋಟೆ ಜಗಳವು ಪ್ರಮುಖವಾದ ಆಚರಣೆಯಾಗಿದೆ.

**ಕೋಟಿ ಜಗಳ:**

ಇದು ಒಂದು ವಿನೋದಕೂಟವೆಂದೆ ಪ್ರಸಿದ್ಧವಾಗಿದೆ. ಇದಕ್ಕೆ ಪುರಾಣದಲ್ಲಿ ವಿರಾಟರಾಜನ ಕಾಲದಲ್ಲಿ ನಡೆದ ಗೋಗ್ರಹಣದ ಘಟನೆಗೆ ತಾಳೆ ಮಾಡಿ ಹೇಳುತ್ತಾರೆ. ಕೋಟಿ ಜಗಳ ಪ್ರಸಂಗವು ನಿರ್ದಿಷ್ಟವಾದ ಗೊತ್ತು ಮಾಡಿದ ಸ್ಥಳದಲ್ಲಿ ನಡೆಯುತ್ತದೆ. ಕೋಟಿಯ ಆವರಣದೊಳಗೆ ಸ್ತ್ರೀ ಪುರುಷರು, ನಿರ್ದಿಷ್ಟವಾದ ಸ್ಥಳಗಳಲ್ಲಿ ನಿಂತಿರುತ್ತಾರೆ. ಗುರುತು ಪಡಿಸಿದ ಗಡಿಯೊಳಗೆ ಎಲ್ಲರೂ ಸಂಚರಿಸಬೇಕೆಂದೂ ಒಂದು ವೇಳೆ ಯಾರಾದರೂ ಗಡಿ ಮೀರಿದರೆ ಅವರಿಗೆ ಹಳೆಯದಾದ ಪೊರಕೆ, ಮೊರಗಳಿಂದ ಥಳಿಸುವ ಸಂಪ್ರದಾಯವಿದೆ. ಈ ಆಚರಣೆಯನ್ನು ಎಲ್ಲಾ ಭಕ್ತರೂ ವಿನೋದದಿಂದ ಸ್ವಾಗತಿಸುತ್ತಾರೆ. ಕೆಲವು ಭಕ್ತರು ಹಣಕೊಟ್ಟು ತಮಗೆ, ತಮ್ಮ ಮಕ್ಕಳಿಗೆ ಹಳೆಯ ಪೊರಕೆ, ಮೊರಗಳಿಂದ ಹೊಡೆಸಿಕೊಳ್ಳುತ್ತಾರೆ. ಯುಗಾದಿ ಹಬ್ಬದ ಮಾರನೆಯ ದಿನವಾದ ವರ್ಷದೊಡುಕಿನ ದಿನ ಬಯ್ಸಿಕೊಂಡರೆ ಒಳ್ಳೆಯದಾಗುತ್ತದೆ ಎಂದು ಜನ ನಂಬಿರುವಂತೆ, ಕರಗದ ಗುಡಿಯಲ್ಲಿ ಬಳಸಿರುವ ಪೊರಕೆ, ಮೊರಗಳಿಂದ ಕೋಟಿ ಜಗಳ ಉತ್ಸವದ ದಿನ ಹೊಡೆಸಿಕೊಂಡರೆ ಪುಣ್ಯ ಬರುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಈ ಕೋಟಿ ಉತ್ಸವದ ಸಂದರ್ಭದಲ್ಲಿ ಕೋಟಿಯ ಆವರಣಕ್ಕೆ ಪಾಂಡವರು, ದ್ರೌಪದಿ ಮತ್ತು ಶ್ರೀಕೃಷ್ಣರ ಸಮೇತ ಆಗಮಿಸಿ ಭಕ್ತರಿಗೆ ಒಳಿತು ಮಾಡುತ್ತಾರೆಂಬ ಐತಿಹ್ಯವೂ ಇದೆ.

**ಪರಾಮರ್ಶನ ಗ್ರಂಥಗಳು:**

1. ಕೃಷ್ಣಮೂರ್ತಿ ಪಿ.ವಿ., (2018), ಆನೇನಾಡು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ದೇವರ ಕೊಂಡಾರೆಡ್ಡಿ, (2019), ಬನ್ನೇರುಘಟ್ಟ ದರ್ಶನ, ಸ್ವ್ಯಾನ್ ಪ್ರಿಂಟರ್ಸ್, ಬೆಂಗಳೂರು.
3. ನಾಗರಾಜ್ ಆರ್., (2008), ಆನೇಕಲ್ಲಿನ ಅಪರೂಪದ ವ್ಯಕ್ತಿಗಳು, ಮಾನಸ ಫೌಂಡೇಶನ್, ಬೆಂಗಳೂರು.
4. ರಾಮಚಂದ್ರ ಶ್ರೌತಿ ವಿ., (1985), ಶ್ರೀ ಗಜಶಿಲಾಪುರಿ ಕ್ಷೇತ್ರದ ಮಹಿಮೆ, ವಿಶಾಲ ಮುದ್ರಣಾಲಯ, ಆನೇಕಲ್.
5. ವಿಜಯ್‌ಕುಮಾರ್ ಸಿ.ಆರ್., (2004), ಆನೇಕಲ್ ತಾಲ್ಲೂಕು ದರ್ಶನ, ಗೀತಾಲಯ ಪ್ರಕಾಶನ, ಚಂದಾಪುರ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.